**ಸಾಕ್ಷಿಗೆ ದಿನಾಂಕ 02.04.2026 ರಂದು ಪ್ರಮಾಣ ವಚನ ನೀಡಲಾಯಿತು.**

**ಪಾಟೀಸವಾಲುಃ ಪ್ರತಿವಾದಿ ಪರ B.S.Y.ವಕೀಲರಿಂದಃ**

ನಾನು 10 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದು ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನಾನು ಹಾಜರುಪಡಿಸಿದ ದಾಖಲೆಗಳನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲೆಗಳು ಇಲ್ಲ. ನನ್ನ ಪರವಾಗಿ ಬೇರೆ ಯಾರು ಸಾಕ್ಷಿದಾರರು ಇರುವುದಿಲ್ಲ. 2013 ರಲ್ಲಿ ಮೃತ್ಯ ಪತ್ರವನ್ನು ಕದರೇಗೌಡ, ನಾರಾಯಣಗೌಡ ಮತ್ತು ಚನ್ನೇಗೌಡ ಬರೆದು ನನಗೆ ತಂದು ಕೊಟ್ಟಿರುತ್ತಾರೆ. ಕದರೇಗೌಡರವರಿಗೆ 4 ಜನ ಮಕ್ಕಳು, ನಾರಾಯಣಗೌಡ, ಗೌರಮ್ಮ, ಸರಸ್ವತಿ ಮತ್ತು ಚನ್ನೇಗೌಡ. ದಾವಾ ಸ್ವತ್ತು ಕದರೇಗೌಡರವರಿಗೆ ದರ್ಖಾಸ್ತು ಮೂಲಕ ಬಂದಿರುತ್ತದೆ. ಪ್ರತಿವಾದಿಯರು ಕದರೇಗೌಡರವರ ಮಕ್ಕಳು ಎಂದರೆ ಸರಿ. ದಾವಾ ಸ್ವತ್ತನ್ನು ಒಟ್ಟು ಕುಟುಂಬದ ಪರವಾಗಿ ಕದರೇಗೌಡರವರಿಗೆ ಮಂಜೂರು ಮಾಡಿರುತ್ತಾರೆ ಎಂದರೆ ಸರಿ. ಮೃತ್ಯ ಪತ್ರಕ್ಕೆ ಸಂಬಂಧಿಸಿದಂತೆ ಪ್ರೊಬೇಟ್ ನ್ನು ಪಡೆದುಕೊಂಡಿಲ್ಲ. 2013 ರಲ್ಲಿ ಕದರೇಗೌಡರವರಿಗೆ ಎಷ್ಟು ವರ್ಷ ವಯಸ್ಸಾಗಿತ್ತು ಎಂದು ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ 75 ವರ್ಷ ದಾಟಿದ ವ್ಯಕ್ತಿಗಳಿಗೆ ನೆನಪಿನ ಶಕ್ತಿ ಬುದ್ಧಿಶಕ್ತಿ ಕಡಿಮೆ ಇರುತ್ತದೆ ಎಂದರೆ ಸರಿ. ನಿಪಿ-1 ರಲ್ಲಿ ಕದರೇಗೌಡರವರಿಗೆ 80 ವರ್ಷ ವಯಸ್ಸು ಎಂದು ನಮೂದಾಗಿರುತ್ತದೆ ಎಂದರೆ ಸರಿ. ಕದರೇಗೌಡರವರಿಗೆ 85-90 ವರ್ಷ ವಯಸ್ಸು ಎಂದರೆ ನನಗೆ ಗೊತ್ತಿಲ್ಲ.

ನಿಪಿ-1 ಮೃತ್ಯ ಪತ್ರಕ್ಕೆ 1 ಮತ್ತು 2 ನೇ ಪ್ರತಿವಾದಿಗಳು ಸಹಿ ಮಾಡಿರುತ್ತಾರೆ. ನಿಪಿ-1 ರ ಸಾಕ್ಷಿದಾರರು ನನ್ನ ಪರವಾಗಿ ಬಂದು ಸಾಕ್ಷ್ಯ ನುಡಿಯುದಿಲ್ಲ. ಪ್ರತಿವಾದಿಯರು ಅವಿದ್ಯಾವಂತರಾಗಿದ್ದು ಓದ ಬರಹ ಬರುವುದಿಲ್ಲ ಎಂದರೆ ಸರಿ. ಪ್ರತಿವಾದಿಯವರು ಕುಟುಂಬದಲ್ಲಿ ನನ್ನನ್ನು ಹೊರತುಪಡಿಸಿ ಉಳಿದವರೆಲ್ಲಾರು ಅವಿದ್ಯಾಂತರು ಎಂದರೆ ಸರಿ. ಕದರೇಗೌಡರವರು ಅವಿದ್ಯಾಂತರಾಗಿದ್ದು ಸುಳ್ಳು ಮಾಹಿತಿ ನೀಡಿ ಮೃತ್ಯ ಪತ್ರವನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಕದರೇಗೌಡರವರಿಗೆ ಮಕ್ಕಳು ಇರುವುದರಿಂದ ನನ್ನ ಹೆಸರಿಗೆ ಮೃತ್ಯ ಪತ್ರ ಬರೆದಿರುವುದಿಲ್ಲ ಎಂದರೆ ಸರಿಯಲ್ಲ ಮೃತ್ಯ ಪತ್ರ ಸೃಷ್ಟಿಸಿರುವುದರಿಂದ ಪ್ರೊಬೇಟ್ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಕದರೇಗೌಡರವರಿಗೆ ವಯಸ್ಸಾಗಿದ್ದು

ಹಾಗೂ ಬುದ್ಧಿ ಶಕ್ತಿ ಇಲ್ಲದೇ ಇರುವುದರಿಂದ ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತೇನೆ ಎಂದು ಮೃತ್ಯ ಪತ್ರ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಖಾತೆ ಪ್ರತಿವಾದಿಯರ ಹೆಸರಿನಲ್ಲಿರುತ್ತದೆ. ಪ್ರತಿವಾದಿಯರ ಹೆಸರಿಗೆ ಯಾವಾಗ ಖಾತೆ ಆಗಿರುತ್ತದೆ ನನಗೆ ಗೊತ್ತಿಲ್ಲ. ಖಾತೆಯನ್ನು ಪ್ರಶ್ನಿಸಿ ಮಾನ್ಯ ಉಪವಿಭಾಗಾಧಿಕಾರಿರವರ ಸಮಕ್ಷಮ ಪ್ರಶ್ನಿಸಿರುತ್ತೇನೆ. ಉಪವಿಭಾಗಾಧಿಕಾರಿ ಕಛೇರಿಯಲ್ಲಿ ಅರ್ಜಿಯನ್ನು ಸಲ್ಲಿಸಿದ ಬಗ್ಗೆ ದಾಖಲೆಯನ್ನು ವಕೀಲರಿಗೆ ನೀಡಿರುತ್ತೇನೆ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ದಾವಾ ಸ್ವತ್ತಿನಲ್ಲಿ ಪ್ರತಿವಾದಿಯರು ಮಾಲೀಕರಾಗಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ ನಾನು ಸ್ವಾಧೀನದಲ್ಲಿದ್ದೇನೆ.

ದಾವಾ ಸ್ವತ್ತಿನಲ್ಲಿ ನಾನು ಸ್ವಾಧೀನದಲ್ಲಿದ್ದೇನೆ ಎಂದು ತೋರಿಸಲು ದಾಖಲೆಗಳು ಇಲ್ಲ ಅನುಭೋಗದ ಪ್ರಕಾರ ಸ್ವಾಧೀನದಲ್ಲಿದ್ದೇನೆ. ಅನುಭೋಗದ ಪ್ರಕಾರ ಸ್ವಾಧೀನದಲ್ಲಿದ್ದೇನೆ ಎಂದು ತೋರಿಸಲು ಸಾಕ್ಷಿದಾರರು ಹಾಗೂ ದಾಖಲೆಗಳು ಇಲ್ಲ. ಪ್ರತಿವಾದಿಯರಿಗೆ ಸೇರಿದ ಪಿತ್ರಾರ್ಜಿತ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾಖಲೆ ಹಾಜರುಪಡಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗು ನನಗೂ ಯಾವುದೇ ಸಂಬಂಧ ಇಲ್ಲದೇ ಇದ್ದರು ಸಹ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ್ಯ ಪತ್ರವನ್ನು ಎಷ್ಟು ಗಂಟೆಗೆ ಹಾಗೂ ಎಲ್ಲಿ ಬರೆದಿರುತ್ತಾರೆ ಎಂದು ನನಗೆ ಖುದ್ದು ಮಾಹಿತಿ ಇಲ್ಲ. ನಿಪಿ-1 ರ ಪ್ರಕಾರ ನನಗೆ ದಾವಾ ಸ್ವತ್ತಿನಲ್ಲಿ ಯಾವುದೇ ಹಕ್ಕು ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀಸವಾಲಿಗೆ ಕಾಲವಕಾಶ ಕೇಳಿದ್ದು ಕಾಲವಕಾಶ ನೀಡಲಾಯಿತು.

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

**ಓ.ಹೇ.ಕೇ.ಸರಿ ಇದೆ**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಹುಣಸೂರು.**